

# ಉಮ್ಮತ್ತಾಟ್ ಗುರುವಿಗೆ ‘ಪದ್ಮ’ ಗೌರವ

ಕೊಡಗಿನ ವಿಶಿಷ್ಟ ನೃತ್ಯ ಉಮ್ಮತ್ತಾಟ್ ಅನ್ನು ಸಾವಿರಾರು ಮಂದಿಗೆ ಕಲಿಸಿರುವ ರಾಣಿ ಮಾಚಯ್ಯ ಅವರ ಕಲಾಸೇವೆಗೀಗ ಪದ್ಮಶ್ರೀ ಪ್ರಶಸ್ತಿಯ ಹೊಳಪು. ‘ಇದು ನನ್ನ ಬಳಿ ಕಲಿತ ಮಕ್ಕಳಿಗೆ, ಕಲಿಯುವ ಅವಕಾಶ ಕಲ್ಪಿಸಿದ ಮಕ್ಕಳ ಪೋಷಕರಿಗೆ ಸಂದ ಗೌರವ’ ಎನ್ನುವುದು ಅವರ ವಿನಮ್ರ ಮಾತು.

■ ಕೆ.ಎಸ್. ಗಿರೀಶ

ಫೋಟೊ: ರಂಗಸ್ವಾಮಿ

‘ಕೈಕಾಲು ಇರುವವರೆಗೂ ಉಮ್ಮತ್ತಾಟ್ ಕಲಿಸುವೆ’– ಹೀಗೆಂದು ಹೇಳುವಾಗ ಐಮುಡಿಯಂಡ ರಾಣಿ ಮಾಚಯ್ಯ ಅವರ ದನಿಯೊಳಗೂ ನೃತ್ಯದ ಲಯ ಇದ್ದಂತಿತ್ತು. 79ನೇ ವಯಸ್ಸಿನಲ್ಲೂ ಹದಿಹರೆಯದವರಂತೆ ಉಮ್ಮತ್ತಾಟ್ ಹಾಡಿಗೆ ಹೆಜ್ಜೆ ಹಾಕುತ್ತಾರೆ.

‘ನಿಮಗೆ ಪದ್ಮಶ್ರೀ ಪ್ರಶಸ್ತಿ ಬಂದಿದೆ, ಅಭಿನಂದನೆಗಳು’ ಎಂದು ಶುಭಾಶಯ ಕೋರಿದಾಗ ಅವರು ಪ್ರತಿಕ್ರಿಯಿಸಿದ್ದು: ‘ತಮಾಷೆ ಮಾಡಲೂ ಇತಿಮಿತಿ ಇರುತ್ತದೆ. ನಾನೇನು ಮಾಡಿದ್ದೇನೆ ಎಂದು ಅಂತಹ ದೊಡ್ಡ ಪ್ರಶಸ್ತಿ ಕೊಡುತ್ತಾರೆ?’.

ರಾಣಿ ಮಾಚಯ್ಯ ಅವರು ಇರುವುದೇ ಹಾಗೆ, ಎಲೆಮರೆಯ ಮರದಂತೆ. ಅವರದೇ ಮಾತಿನ ಚುಂಗು ಹಿಡಿದು, ‘ಹಾಗಾದರೆ ನೀವೇನೂ ಮಾಡಿಲ್ಲವೇ?’ ಎಂದು ಪ್ರಶ್ನಿಸಿದರೆ, ‘ಸುಮಾರು ಹತ್ತು ಸಾವಿರ ಮಂದಿಗೆ ಉಮ್ಮತ್ತಾಟ್ ಕಲಿಸಿರುವೆ. 10 ರಾಜ್ಯ ಸುತ್ತಿ ಪ್ರದರ್ಶನ ನೀಡಿರುವೆ, ಅಷ್ಟೇ... ಸಾಧಿಸಬೇಕಾದ್ದು ಇನ್ನೂ ಇದೆ’ ಎನ್ನುತ್ತಾರೆ. ಸಾಧಕರೆಲ್ಲ ಇರುವುದು ಹೀಗೇ ಅಲ್ಲವೇ?

ಮುಗ್ಧ ವ್ಯಕ್ತಿತ್ವದ ರಾಣಿ ಮಾಚಯ್ಯ ಕೊಡಗಿನ ವಿಶಿಷ್ಟ ಕಲೆಯಾದ ಹಾಗೂ ಕೊಡವರ ಅಸ್ಮಿತೆ ಎನಿಸಿದ ‘ಉಮ್ಮತ್ತಾಟ್’ ನೃತ್ಯಗುರು. ಮಕ್ಕಳಿಗೆ ಯಾವುದೇ ಜಾತಿ–ಧರ್ಮದ ಭೇದವಿಲ್ಲದೆ ನೃತ್ಯ ಕಲಿಸುವುದರಲ್ಲಿ ಸಾರ್ಥಕತೆ ಕಾಣುತ್ತಿರುವವರು. ‘ಕಾವೇರಿ ಕಲಾ ವೃಂದ’ ಕಟ್ಟಿಕೊಂಡು, ಅಸಂಖ್ಯಾತ ಮಂದಿಗೆ ಉಮ್ಮತ್ತಾಟ್ ಕಲೆಯನ್ನು ಧಾರೆ ಎರೆಯುತ್ತಿದ್ದಾರೆ.

ರಾಣಿ ಮಾಚಯ್ಯ ಅವರ ತವರು ವಿರಾಜಪೇಟೆ ತಾಲ್ಲೂಕಿನ ಸಿದ್ದಾಪುರ (ಜನನ: 1943ರ ಏಪ್ರಿಲ್ 4). ತಂದೆ ಮೇದಪ್ಪ, ತಾಯಿ ತಾಯಮ್ಮ. ಕಂಡ್ರತಂಡ ಕುಟುಂಬದ ಮೇದಪ್ಪನವರು ಸಿದ್ದಾಪುರದಲ್ಲಿ ಉದ್ಯಮಿಯಾಗಿದ್ದರು. ತಾಯಮ್ಮ ಶಿಕ್ಷಕಿಯಾಗಿದ್ದರು. ವಿರಾಜಪೇಟೆ ಸಮೀಪ ಕಾಕೋಟುಪರಂಬುವಿನಲ್ಲಿ ತೋಟ ಖರೀದಿಸಿದ ಮೇದಪ್ಪ, ಅಲ್ಲಿಯೇ ನೆಲೆ ನಿಂತರು. ರಾಣಿ ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಾಕೋಟುಪರಂಬುವಿನಲ್ಲಿ, ಪ್ರೌಢಶಾಲೆ ಹಾಗೂ ಕಾಲೇಜು ಶಿಕ್ಷಣವನ್ನು ಮಡಿಕೇರಿ ಸರ್ಕಾರಿ ಕಾಲೇಜಿನಲ್ಲಿ ಪಡೆದರು.